ಗೃಹ ಮಂಡಳಿಯಲ್ಲಿ ನಿವೃತ್ತರಾದ ನೌಕರರು

4918 - ಶ್ರೀ ಸದಾನಂದಗೌಡ ಡಿ.ವಿ. (ಪುತ್ತೂರು) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ಗೃಹ ಮಂಡಳಿಯಲ್ಲಿ ನೇಮಿಸಿಕೊಳ್ಳಲಾಗಿರುವ ನಿವೃತ್ತ ನೌಕರರ ಸಂಖ್ಯೆ ಎಷ್ಟು? (ಹುದ್ದೆವಾರು ನೇಮಕದ ದಿನಾಂಕದ ವಿವರ ನೀಡುವುದು)*

ಆ) *ಇತ್ತೀಚಿನ ಕರ್ನಾಟಕ ಉಚ್ಚ ನ್ಯಾಯಾಲಯ ತೀರ್ಪಿನ ಪ್ರಕಾರ ಸರ್ಕಾರಿ ಸೇವೆಯಲ್ಲಿ ಇದ್ದು ನಿವೃತ್ತರಾದ ನೌಕರರನ್ನು ಸರ್ಕಾರಿ ನಿಗಮ: ಮಂಡಳಿಗಳಿಗೆ, ಸರ್ಕಾರಿ ಕಛೇರಿಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಬಾರದೆಂದು ಆದೇಶ ನೀಡಿದೆಯೆ?*

ಇ) *ಮಂಡಳಿಯಲ್ಲಿ ಅಧಿಕೃತ ಹುದ್ದೆಯನ್ನು ಅಲ್ಲಿನ ಉದ್ಯೋಗಿಗಳಿಗೆ ಪದೋನ್ನತಿ ನೀಡುವ ಮೂಲಕ ತುಂಬುವುದರ ಬದಲು ಬೇರೆ ಬೇರೆ ಇಲಾಖೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದವರು ಮತ್ತು ಖಾಸಗಿ ಸಂಸ್ಥೆ ಉದ್ಯೋಗಿಗಳನ್ನು ಗುತ್ತಿಗೆ ಆಧಾರದ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿರುವುದರಿಂದ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿದಂತೆ ಆಗುವುದಿಲ್ಲವೆ?*

ಶ್ರೀ ಖಮರುಲ್ ಇಸ್ಲಂ (ವಸತಿ ಸಚಿವರು) :

ಅ) ಪ್ರಸ್ತುತ ಇಬ್ಬರೂ ಕೆಲಸ ಮಾಡುತ್ತಿದ್ದಾರೆ

1) ಶ್ರೀ. ಅಶ್ವತ್ಥನಾರಾಯಣ ತಾಂತ್ರಿಕ ಸಲಹೆಗಾರರು ದಿನಾಂಕ : 6.2.1999

2) ಶ್ರೀ. ತಮ್ಮಣ್ಣ ಆಡಳಿತ ಸಲಹೆಗಾರರು ದಿನಾಂಕ : 17.1.2000

ಆ) ಇಲ್ಲ.

ಇ) ಕರ್ನಾಟಕ ಗೃಹ ಮಂಡಳಿಯ ವೃಂದ ಮತ್ತು ನೇಮಕಾತಿ ನಿಯಮಾವಳಿಯಲ್ಲಿರುವ ಖಾಲಿ ಹುದ್ದೆಗಳಿಗೆ ನಿವೃತ್ತಿಯಾದವರನ್ನು ನೇಮಿಸಿಕೊಳ್ಳುವುದರ ಮೂಲಕ ಭರ್ತಿ ಮಾಡಿರುವುದಿಲ್ಲ.

ಗ್ರಾಮೀಣ ರಸ್ತೆಗಳ ಅಭಿವೃದ್ಧಿಯನ್ನು ಎ.ಪಿ.ಎಂ.ಸಿ. ಹಮ್ಮಿಕೊಂಡಿರುವ ವಿಚಾರ

4919 - ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಈ ಹಿಂದಿನ ಸರ್ಕಾರ ಹಮ್ಮಿಕೊಂಡಿರುವ ಗ್ರಾಮೀಣ ರಸ್ತೆಗಳ ಅಭಿವೃದ್ಧಿಯನ್ನು ಎ.ಪಿ.ಎಂ.ಸಿ. ಪುನಃ ಹಮ್ಮಿಕೊಳ್ಳುವ ಇರಾದೆ ಸರ್ಕಾರಕ್ಕೆ ಇದೆಯೆ?*

ಆ) *ಈ ಹಿಂದೆ ಎ.ಪಿ.ಎಂ.ಸಿ.ಯಿಂದ ರಚಿಸಲ್ಪಟ್ಟ ರಸ್ತೆಯ ನಿರ್ವಹಣೆ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು?*

ಇ) ಪುತ್ತೂರು ಎ.ಪಿ.ಎಂ.ಸಿ.ಯ ಚುನಾವಣೆ ನಡೆಸುವ ಬಗ್ಗೆ ಪೂರ್ಣ ಸಿದ್ಧತೆಗಳು ಮುಗಿದಿದ್ದು, ಸುಮಾರು 7 ತಿಂಗಳುಗಳು ಕಳೆದರೂ ಇದುವರೆಗೂ ಚುನಾವಣೆ ನಡೆಸದೇ ಇರಲು ಕಾರಣವೇನು?

ಈ) 1999-2000 ವರ್ಷದ ಎ.ಪಿ.ಎಂ.ಸಿ. ಪುತ್ತೂರಿನ ಆದಾಯ ಎಷ್ಟು?

ಉ) 1999-2000ನೇ ವರ್ಷದ ಪುತ್ತೂರು ಎ.ಪಿ.ಎಂ.ಸಿ.ಯ ಖರ್ಚು ಮತ್ತು ಯಾವ ಯಾವ ಉದ್ದೇಶಕ್ಕೆ ಎಷ್ಟೆಷ್ಟು ಖರ್ಚು ಮಾಡಲಾಗಿದೆ?

ಶ್ರೀ ಆರ್.ಬಿ. ತಿಮ್ಮಾಪುರ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಇಲ್ಲ.

ಆ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ವಶದಲ್ಲಿರುವ ಗ್ರಾಮೀಣ ಸಂಪರ್ಕ ರಸ್ತೆಗಳ ಅಭಿವೃದ್ಧಿ ಮತ್ತು ನಿರ್ವಹಣೆಯನ್ನು ಸಂಬಂಧಪಟ್ಟ ಮಾತೃಇಲಾಖೆಗೆ ವರ್ಗಾಯಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಪುತ್ತೂರು ಮಾರುಕಟ್ಟೆ ಸಮಿತಿಗೆ ಚುನಾವಣೆ ನಡೆಸುವಂತೆ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ದಾಖಲಾಗಿದ್ದು, ವಿಚಾರಣೆ ನಡೆಯುತ್ತಿದೆ. ಜಿಲ್ಲಾಧಿಕಾರಿಗಳು ಚುನಾವಣೆ ಪೂರ್ವ ಸಿದ್ಧತೆಗಳನ್ನು ಮಾಡಿಕೊಂಡಿದ್ದು, ಚುನಾವಣೆ ನಡೆಸುವ ಬಗ್ಗೆ ಸರ್ಕಾರದ ಅನುಮತಿಯನ್ನು ಕೊರಿದ್ದು ಇದು ಪರಿಶೀಲನೆಯಲ್ಲಿದೆ.

ಈ) 1999-2000ನೇ ಸಾಲಿನಲ್ಲಿ ಪುತ್ತೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಆದಾಯ ರೂ. 70,95,51800

ಉ) 1999-2000ನೇ ಸಾಲಿನಲ್ಲಿ ಪುತ್ತೂರು ಎಪಿಎಂಸಿಯ ಖರ್ಚಿನ ವಿವರ ಈ ಕೆಳಕಂಡಂತಿದೆ.

		ರೂ.ಗಳಲ್ಲಿ
1. ಶಾಸನಬದ್ಧ ವಂತಿಗೆಗಳು	-	17,32,474-00
2. ಭೂಸ್ವಾಧೀನ	-	1,84,266-00
3. ಫ್ಲೋರ್ ಪ್ರೈಸ್ ಯೋಜನೆಯ ಆವರ್ತ ನಿಧಿಗೆ ವಂತಿಗೆ	-	8,30,000-00
4. ಅಭಿವೃದ್ಧಿ ಕಾಮಗಾರಿ	-	24,92,995-00
5. ಸಮಿತಿಯ ಆಡಳಿತ ನಿರ್ವಹಣೆ ವೆಚ್ಚ	-	4,85,780-00
6. ಓರಿಸ್ಸಾ ಚಂಡಮಾರುತ ಪರಿಹಾರ ನಿಧಿಗೆ ವಂತಿಗೆ	-	10,990-00

7. ಕಾರ್ಗಿಲ್ ನಿಧಿಗೆ ವಂತಿಗೆ	-	25,000-00
8. ಪ್ರಾಂಗಣದ ಭದ್ರತಾ ವ್ಯವಸ್ಥೆ	-	2,29,120-00
ಒಟ್ಟು ರೂ.	-	**59,89,635-00**

ನಗರ ಸಾರಿಗೆ ವ್ಯವಸ್ಥೆ ಕುರಿತು

4920 - ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಆರು ವರ್ಷಗಳಿಂದ ಇಲ್ಲಿಯವರೆಗೆ ಮೈಸೂರು ನಗರದ ವಿವಿಧ ಬಡಾವಣೆಗಳಿಗೆ ಹೊಸದಾಗಿ ಬಸ್ಸು ಸಂಚಾರ ವ್ಯವಸ್ಥೆ ಮಾಡುವಂತೆ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು? ಜನಪ್ರತಿನಿಧಿಗಳಿಂದ ನಾಗರೀಕರಿಂದ ಸಂಘಸಂಸ್ಥೆಗಳಿಂದ ಯಾವ ಯಾವ ದಿನಾಂಕಗಳಂದು ಯಾರ್ಯಾರಿಂದ ಈ ಅರ್ಜಿಗಳು ಬಂದಿವೆ?

ಆ) ಈ ಅರ್ಜಿಗಳ ಬಗ್ಗೆ ಅಂತಿಮ ತೀರ್ಮಾನವನ್ನು ಎಂದು ಕೈಗೊಳ್ಳಲಾಗಿದೆ? ಏನೇನು ತೀರ್ಮಾನ ಕೈಗೊಳ್ಳಲಾಗಿದೆ? ಈ ಅರ್ಜಿಗಳ ಸಂಬಂಧ ಏನು ಹಿಂಬರಹ ನೀಡಲಾಗಿದೆ?

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) :

ಅ) ಕಳೆದ ಆರು ವರ್ಷಗಳಿಂದ ಮೈಸೂರು ನಗರದಲ್ಲಿನ ವಿವಿಧ ಬಡಾವಣೆಗಳಿಂದ ಹೊಸದಾಗಿ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಿಕೊಡುವ ಸಲುವಾಗಿ 68 ಅರ್ಜಿಗಳು ಬಂದಿದ್ದು ಅವುಗಳ ವಿವರ ಕೆಳಕಂಡಂತಿದೆ.

ಅರ್ಜಿಯು ಬಂದ	ವರ್ಷ					
ವಿವರ	1995	96	97	98	99	2000 ಮತ್ತು ಇಲ್ಲಿಯವರೆಗೆ
ಚುನಾಯಿತ ಪ್ರತಿನಿಧಿಗಳಿಂದ	-	1	3	11	14	12
ಸಂಘ ಸಂಸ್ಥೆಗಳಿಂದ	-	-	-	-	7	5
ಸಾರ್ವಜನಿಕರಿಂದ	-	1	-	-	7	7
ಒಟ್ಟು	**-**	**2**	**3**	**11**	**28**	**24 = 68**

ಅರ್ಜಿದಾರರ, ಅರ್ಜಿಯನ್ನು ಪಡೆದ ದಿನಾಂಕ ಮತ್ತು ಇವುಗಳ ಸಂಬಂಧವಾಗಿ ತೆಗೆದುಕೊಂಡ ಕ್ರಮಗಳ ವಿವರಗಳನ್ನು ಅನುಬಂಧ - ಅ ನಲ್ಲಿ ಒದಗಿಸಲಾಗಿದೆ.